# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ-9570/2018/ಡಿ.ಆರ್.ಇ-2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 12/12/2019

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಟೆಂಡರ್ ಪ್ರಕ್ರಿಯೆಯನ್ನು ತ್ವರಿತವಾಗಿ ಮುಗಿಸಿ, ಅದು ಮುಗಿದ ನಂತರ ನಿಯಮಾನುಸಾರ ತ್ರಿಚಕ್ರ ವಾಹನ ಸೌಲಭ್ಯವನ್ನು ದೂರುದಾರರಿಗೆ ಒದಗಿಸಲು ಸೂಕ್ತ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ಚೆಲುವಾಚಾರ್ ಬಿನ್ ಸಿ.ನರಸಿಂಹಾಚಾರ್, 2ನೇ ಕ್ರಾಸ್, ಹಿಪ್ಪೆತೋಪು, ಚಾಮುಂಡೇಶ್ವರಿ ಬಡಾವಣೆ, ಕೆರೆಗೋಡಿ ರಸ್ತೆ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಶ್ರೀ ಚಂದ್ರಶೇಖರ್, ಕಮೀಷನರ್, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ತಾವು ಒಂದು ಕಾಲು ಪೂರ್ತಿ ಇಲ್ಲದ ಅಂಗವಿಕಲನಾಗಿದ್ದು, ಶೇ.90ರಷ್ಟು ಅಂಗವಿಕಲತೆ ಹೊಂದಿರುತ್ತಾರೆ. ದಿನಾಂಕ: 14/12/2015 ರಂದು ಎದುರುದಾರರ ಕಛೇರಿಯಿಂದ ಅಂಗವಿಕಲರಿಗೆ ತ್ರಿಚಕ್ರ ವಾಹನದ ಸೌಲಭ್ಯಕ್ಕೆ ಅರ್ಜಿ ಕರೆದಿದ್ದು, ಆಗ ದೂರುದಾರರು ತ್ರಿಚಕ್ರ ವಾಹನ ಕೋರಿ ಅರ್ಜಿ ಸಲ್ಲಿಸಿದ್ದರು. ಆತನ ಜೊತೆಗೆ ವಾಹನದ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಿದ ಇತರರಿಗೆ ತ್ರಿಚಕ್ರ ವಾಹನವನ್ನು ಮಂಜೂರು ಮಾಡಿದ್ದು, ದೂರುದಾರರಿಗೆ ಮಂಜೂರು ಮಾಡಿರುವುದಿಲ್ಲ. ಕಛೇರಿಗೆ ಹೋಗಿ ಎದುರುದಾರರನ್ನು ವಿಚಾರಿಸಿದಾಗ ತ್ರಿಚಕ್ರ ವಾಹನ ಬಂದಿರುವುದಿಲ್ಲವೆಂದು ಹೇಳಿರುತ್ತಾರೆ. ಕಾರಣ ದೂರುದಾರರಿಗೆ ತ್ರಿಚಕ್ರ ವಾಹನ ಕೊಡಿಸಬೇಕೆಂದು ಕೋರಿರುತ್ತಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದಿನಾಂಕ: 14/12/2015ರಂದು ತ್ರಿಚಕ್ರ ವಾಹನ ಸೌಲಭ್ಯಕ್ಕೆ ಅರ್ಜಿ ಸಲ್ಲಿಸಿದ್ದರು. 2015-16ನೇ ಸಾಲಿನಲ್ಲಿ ವಿಕಲಚೇತನರಿಗೆ ತ್ರಿಚಕ್ರ ವಾಹನವನ್ನು ಮಂಜೂರು ಮಾಡಲು 8 ಬಾರಿ ಟೆಂಡರ್ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸದ ಕಾರಣ ಟೆಂಡರ್ ರದ್ದುಪಡಿಸಿ ಮರುಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ದೂರುದಾರರಿಗೆ ವಿಕಲಚೇತನ ತ್ರಿಚಕ್ರ ವಾಹನ ನೀಡಲು ನಿಯಮಾನುಸಾರ ಕ್ರಮವಹಿಸಲಾಗುವುದೆಂದು ತಿಳಿಸಿರುತ್ತಾರೆ. ಆಕ್ಷೇಪಣೆಯ ಜೊತೆಗೆ 8 ಬಾರಿ ಟೆಂಡರ್ ಕರೆದ ಬಗ್ಗೆ ದಿನಪತ್ರಿಕೆಗಳ ಜಾಹಿರಾತು ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

4. ಜಿಲ್ಲಾಧಿಕಾರಿಗಳು, ತುಮಕೂರು ಅವರಿಂದ 2015-16ನೇ ಸಾಲಿನಿಂದ ಸದರಿ ಟೆಂಡರ್ ಬಾಕಿ ಉಳಿದಿರುವುದಕ್ಕೆ ಕಾರಣಗಳೇನೆಂಬುವ ಬಗ್ಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿಯನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಲು ಸೂಚಿಸಲಾಗಿತ್ತು. ಆದರೆ ಜಿಲ್ಲಾಧಿಕಾರಿಯವರಿಂದ ಯಾವುದೇ ವರದಿ ಬಂದಿರುವುದಿಲ್ಲ. ಬದಲಾಗಿ ಜಿಲ್ಲಾಧಿಕಾರಿಯವರ ಕಛೇರಿಯಿಂದ ಯೋಜನಾ ನಿರ್ದೇಶಕರು, ತುಮಕೂರು, ಅವರು ತಮ್ಮ ವರದಿ ದಿನಾಂಕ: 16/01/2019 ನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಪುನ: ಎದುರುದರರು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿದ ವಿಚಾರವನ್ನೇ ಪುನರುಚ್ಚರಿಸಿದ್ದಾರೆಯೇ ಹೊರತು ಟೆಂಡರ್ ಪ್ರಕ್ರಿಯೆಯಲ್ಲಿ ವಿಳಂಬವಾದುದ್ದಕ್ಕೆ ಯಾವುದೇ ಕಾರಣವನ್ನು ತಿಳಿಸಿರುವುದಿಲ್ಲ.

5. ದಿನಾಂಕ: 06/08/2019 ರಂದು ಜಿಲ್ಲಾಧಿಕಾರಿಯವರ ಕಾರ್ಯಾಲಯ, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಜಿಲ್ಲೆ, ತುಮಕೂರು ರವರಿಂದ ಪತ್ರ ಬಂದಿದ್ದು, ಅದರೊಂದಿಗೆ ಅವರು ನಗರಸಭಾ ಕಾರ್ಯಾಲಯ, ತಿಪಟೂರು ರವರ ವರದಿ ಮತ್ತು ದಾಖಲೆಗಳನ್ನು ಕಳುಹಿಸಿದ್ದಾರೆ.

6. ನಗರಸಭಾ ಕಾರ್ಯಾಲಯ, ತಿಪಟೂರು ರವರ ವರದಿಯನ್ನು ಪರಿಶೀಲಿಸಲಾಗಿ, ದಿನಾಂಕ: 10/03/2019 ರಂದು 24/09/2019 ರವರೆಗೆ ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಮರು ಟೆಂಡರ್ ಕರೆಯಲು ಸಾಧ್ಯವಾಗಿರುವುದಿಲ್ಲ. ಅರ್ಜಿದಾರ ಮುಂದಿನ ಕ್ರಮಕ್ಕಾಗ ಕರ್ನಾಟಕ ಪಾರ್ದರ್ಶಕ ಅಧಿನಿಯಮ 2000 ದಂತೆ Indent No: DMA/2018-19/IND 8208/CALL-2 ರಲ್ಲಿ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಸುಪ್ರೀಂಕೋರ್ಟ್ ನಿರ್ದೇಶನದಂತೆ ಹೊಸ ಮಾದರಿಯ ಬಿ3 ಇಂಜಿನ್ ತ್ರಿಚಕ್ರ ವಾಹನಕ್ಕಾಗಿ 9ನೇ ಬಾರಿ ಇತ್ತಿಚಿಗೆ ಮರು

ಟೆಂಡರ್ ಕರೆಯಲಾಗಿದ್ದು, ಟೆಂಡರ್ ತೆರೆಚು ಪರಿಶೀಲನೆ ಮಾಡಲಾಗಿ ಪೂರೈಕ್ಕೆದಾರರಾದ Sai Wheels (Bhargavi Rajan) Tumkur ಇವರುಗಳು ತಾಂತ್ರಿಕವಾಗಿ ಅರ್ಹರಾಗಿದ್ದು ಪೂರೈಕೆದಾರರಿಗೆ ಟೆಂಡರ್‌ನ 5% FSD ರೂ.8,400/- ಗಳನ್ನು ತುಂಬಲು LOA ಪತ್ರ ನೀಡಲಾಗಿದ್ದು, ಇವರುಗಳಿಂದ ಭದ್ರತಾ ಠೇವಣಿಯನ್ನು ನಗರಸಭೆ ತುಂಬಿಸಿಕೊಂಡು ಕಾರ್ಯಾದೇಶ ನೀಡಿ, ನಗರಸಭೆಗೆ ತ್ರಿಚಕ್ರ ವಾಹನವನ್ನು ಖರೀದಿಸಿ ಅರ್ಹ ಫಲಾನುಭವಿಗಳಿಗೆ ವಿತರಣೆ ಮಾಡಲಾಗುವುದೆಂದು ಉಲ್ಲೇಖಿಸಿದ್ದಾರೆ ಮತ್ತು ಅದರ ಜೊತೆಗೆ ದಿನಾಂಕ: 05/07/2019 ರಂದು ಮುನ್ಸಿಪಲ್ ಕಮೀಷನರ್ ರವರು Sai Wheels (Bhargavi Rajan) Tumkur ರವರಿಗೆ ಕಳುಹಿಸಿದ Letter of Acceptance ನೇದ್ದರ ಪ್ರತಿ, ದಿನಾಂಕ: 26/04/2019 ರಂದು ಜಿಲ್ಲಾಧಿಕಾರಿಗಳ ಕಛೇರಿಂದ ನೀಡಿದ ಸಾರ್ವಜನಿಕ ಪ್ರಕಟಣೆ, ಟೆಂಡರ್ ಬ್ಯುಲೆಟಿನ್, ನಗರಸಭಾ ಕಾರ್ಯಾಲಯ ತಿಪಟೂರು ರವರು ದಿನಾಂಕ: 05/05/2019ರ ಪ್ರಜಾ ಪ್ರಗತಿ ಪತ್ರಿಕೆಯಲ್ಲಿ ನೀಡಿದ ಟೆಂಡರ್ ಪ್ರಕಟಣೆಯ ಪ್ರತಿಯನ್ನು ಹಾಜರುಪಡಿಸಿದ್ದಾರೆ. ಎದುರುದಾರರ ಆಕ್ಷೇಪಣೆಯಿಂದ ಈ ಹಿಂದೆ 8 ಬಾರಿ ಟೆಂಡರ್ ಕರೆದರೂ ಸಹಿತ ಅರ್ಹ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸದ ಕಾರಣ ಟೆಂಡರ್ ರದ್ದುಪಡಿಸಿ ಮರು ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿದೆ, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ದೂರುದಾರರಿಗೆ ವಿಕಲಚೇತನ ತ್ರಿಚಕ್ರ ವಾಹನ ನೀಡಲು ನಿಯಮಾನುಸಾರ ಕ್ರಮ ವಹಿಸಲಾಗುವುದೆಂದು ತಿಳಿಸಿರುತ್ತಾರೆ.

7. ನಗರಸಭಾ ಕಾರ್ಯಾಲಯ, ತಿಪಟೂರು ರವರು ಈಗಾಗಲೇ ಟೆಂಡರ್ ಪ್ರಕ್ರಿಯೆಯನ್ನು ಪ್ರಾರಂಭಿಸಿ Sai Wheels (Bhargavi Rajan) Tumkur ರವರಿಗೆ Letter of Acceptance ನೀಡಿದ್ದು ನೋಡಲಾಗಿ, ವಿಲಕಚೇತನರಿಗೆ ತ್ರಿಚಕ್ರ ವಾಹನ ನೀಡುವ ಪ್ರಕ್ರಿಯೆ ಜಾರಿಯಲ್ಲಿದೆ ಎಂಬುದು ಕಂಡುಬರುತ್ತದೆ. ಆದ್ದರಿಂದ, ದೂರುದಾರರಿಗೆ ಸದರಿ ಟೆಂಡರ್ ಪ್ರಕ್ರಿಯೆ ಮುಗಿದ ನಂತರ ನಿಯಮಾನುಸಾರ ತ್ರಿಚಕ್ರ ವಾಹನ ಸೌಲಭ್ಯ ಒದಗಿಸುವಂತೆ ಎದುರುದಾರರಿಗೆ ಸೂಚಿಸುವುದು ಸಮಂಜಸವಾಗುತ್ತದೆ.

8. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಟೆಂಡರ್ ಪ್ರಕ್ರಿಯೆಯನ್ನು ತ್ವರಿತವಾಗಿ ಮುಗಿಸಿ, ಅದು ಮುಗಿದ ನಂತರ ನಿಯಮಾನುಸಾರ ತ್ರಿಚಕ್ರ ವಾಹನ ಸೌಲಭ್ಯವನ್ನು ದೂರುದಾರರಿಗೆ ಒದಗಿಸಲು ಸೂಕ್ತ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ

ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

9. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984, ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಈ ವರದಿ ಮುಟ್ಟಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

12/12/19

[ನ್ಯಾಯಮೂರ್ತಿ ಬಿ.ಎಸ್.ಪಾಟೀಲ]
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**